


## ತಿನ್ನಲು ಯೋಗ್ಯವಲ್ಲದ ಹುಚ್ಚಣಬೆ

ಮಳೆಗಾಲದ ಸಮಯದಲ್ಲಿ ತೇವಭರಿತ ಮಣ್ಣು, ಕೊಳೆಯುತ್ತಿರುವ ಮರದ ತುಂಡು, ಸಾವಯವ ತ್ಯಾಜ್ಯಗಳ ಮೇಲೆ ಬೆಳೆಯುವ ಛತ್ರಿಯಂತಹ ಗುಚ್ಛಗಳೇ ಅಣಬೆಗಳು. ಅಣಬೆಯು ಶಿಲೀಂಧ್ರ ಜಾತಿಯ ಒಂದು ಸಸ್ಯ, ಇದನ್ನು ತರಕಾರಿ ಎಂದು ಪರಿಗಣಿಸಲಾಗುತ್ತದೆ. ಇದು ಪ್ರೊಟೀನ್, ಜೀವಸತ್ವಗಳು ಮತ್ತು ಖನಿಜಾಂಶಗಳಿಂದ ಸಮೃದ್ಧವಾಗಿರುತ್ತದೆ. ಆದಾಗ್ಯೂ, ಎಲ್ಲಾ ಅಣಬೆಗಳು ತಿನ್ನಲು ಯೋಗ್ಯವಲ್ಲ. ಇಂತಹ ತಿನ್ನಲು ಯೋಗ್ಯವಲ್ಲದ ಅಣಬೆಗಳನ್ನು ಹಳ್ಳಿಗಾಡಿನ ಕಡೆ 'ಎರ್ರಣಬೆ' ಅಥವಾ 'ಹುಚ್ಚಣಬೆ' ಎಂತಲೂ ಕರೆಯುತ್ತಾರೆ. ಚಿತ್ರದಲ್ಲಿರುವ ಅಣಬೆಯು ಗಾತ್ರದಲ್ಲಿ ದೊಡ್ಡದಾಗಿದ್ದರೂ ತಿನ್ನಲು ಯೋಗ್ಯವಲ್ಲ. ಇದು ನಮ್ಮ ಕ್ಯಾಮೆರಾ ಕಣ್ಣಿಗೆ ಬಿದ್ದದ್ದು ಹನುಮನ ಜನ್ಮಸ್ಥಳವಾದ ಅಂಜನಾದ್ರಿ ಬೆಟ್ಟದ ತಪ್ಪಲಿನಲ್ಲಿ ಸುರಿದಿದ್ದ ತೆಂಗಿನಕಾಯಿ ಚಿಪ್ಪಿನ ತ್ಯಾಜ್ಯಗಳ ನಡುವೆ.

–ಶೇಖರಯ್ಯ ಟಿ.ಎಚ್.ಎಂ., ಗೆದ್ದಲಗಟ್ಟೆ

## ನೋಟ್‌ಬುಕ್ ಬೆಲೆ 3.25




ನನ್ನ ತಂದೆಯವರ ಹಳೆಯ ಟ್ರಂಕ್ ಒಂದಿದೆ. ಚಿತ್ರದಲ್ಲಿ ಕಾಣುತ್ತಿರುವ ನೋಟ್‌ಬುಕ್ ಸಿಕ್ಕಿದ್ದು ಅದರಲ್ಲಿಯೇ. ಈ ಪುಸ್ತಕ 1990ರ ಕಾಲದ್ದು. ಅಂದರೆ 35 ವರ್ಷದ ಹಳೆಯ ಪುಸ್ತಕ. ಆಗ ವಿದ್ಯಾ, ಲೇಖಕ್ ಎಂಬ ಹೆಸರಿನ ಪುಸ್ತಕಗಳು ಹೆಚ್ಚು ಜನಪ್ರಿಯ. 35 ವರ್ಷದ ಕೆಳಗೆ ಈ ಪುಸ್ತಕದ ಬೆಲೆ ಕೇವಲ ₹3.25 ಅಷ್ಟೇ. ಆಗಿನ ದಿನಕ್ಕೆ ಆ ಹಣವೇ ದೊಡ್ಡ ಮೊತ್ತ. ವಿದ್ಯಾ ಹೆಸರಿನಲ್ಲಿ ಕಂಪಾಸ್, ಇಂಕ್, ಸ್ಕೇಲ್, ಪೆನ್, ಸ್ಲೇಟ್ ಇತ್ಯಾದಿ ಶೈಕ್ಷಣಿಕ ಸಾಮಗ್ರಿಗಳು ದೊರೆಯುತ್ತಿದ್ದವು. ಇಂದು ವಿದ್ಯಾ ಪುಸ್ತಕವು ಮಾರುಕಟ್ಟೆಯಿಂದಲೇ ತೆರೆಗೆ ಸರಿದಿದೆ. ಅದು ಪಡೆದಿದ್ದ ಅಂದಿನ ಮಾರುಕಟ್ಟೆ ಜಾಗವನ್ನು ಇಂದು ಹಲವಾರು ನೋಟ್‌ಪುಸ್ತಕಗಳು ಪಡೆದಿವೆ.

–ದೀಪಶ್ರೀ ಎಸ್., ಕೂಡ್ಲಿಗಿ



## ನಾಗರ ಬೆತ್ತವಲ್ಲ, ಇದು ಹಾವು

ಬೆಳ್ಳಿ ಕಟ್ಟು ಹಾಕಿದ ನಾಗರಬೆತ್ತದ ಹಾಗೆ ಕಾಣಿಸುವ ಇದು ಕಡಂಬಳ ಹಾವು. ಬಿಸಿಲಿಗೆ ಇದರ ಕಟ್ಟುಗಳು ಫಳಫಳ ಹೊಳೆಯುತ್ತವೆ. ಪಶ್ಚಿಮ ಘಟ್ಟದ ಪ್ರದೇಶದಲ್ಲಿ ಇದನ್ನು ಹೆಚ್ಚಾಗಿ ಕಾಣಬಹುದು. ನೋಡಲು ಸಪೂರವಾಗಿದ್ದರೂ ನಾಗರಹಾವಿಗಿಂತಲೂ ಹೆಚ್ಚು ವಿಷಕಾರಿ. ಹೆಚ್ಚು ವಿಷವುಳ್ಳ ಭಾರತದಲ್ಲಿನ ಹಾವುಗಳ ಪೈಕಿ ಇದೂ ಒಂದು. ಕಾಮನ್ ಕ್ರೈಟ್ ಎಂದು ಹೆಸರಿರುವ ಇದು ರಾತ್ರಿ ಸಂಚಾರಿ. ಕಸದ ರಾಶಿ, ಕತ್ತಲಿನ ಬೆಚ್ಚಗಿನ ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುವ ಈ ಹಾವು ಚಕ್ಕುಲಿಯಂತೆ ಸುರುಟಿ ಮಲಗಿದರೆ ಅದರ ಇರುವಿಕೆ ಬಗ್ಗೆ ಗೊತ್ತೇ ಆಗುವುದಿಲ್ಲ. ನವಿಲುಗಳ ಪ್ರಾಬಲ್ಯದಿಂದ ಇದು ಈಗ ತುಂಬ ವಿರಳವಾಗಿ ಕಾಣಿಸಿಕೊಳ್ಳುವಂತಾಗಿದೆ.

–ಪ. ರಾಮಕೃಷ್ಣ ಶಾಸ್ತ್ರಿ, ಬೆಳ್ತಂಗಡಿ

## ಹಾಕ್ ಮಾತ್ ಕ್ಯಾಟರ್ಪಿಲ್ಲರ್

ಚಿತ್ರದಲ್ಲಿ ಕಾಣುತ್ತಿರುವ ಹುಳದ ಹೆಸರು 'ಹಾಕ್ ಮಾತ್ ಕ್ಯಾಟರ್ಪಿಲ್ಲರ್' **(Hawk moth caterpillar)**. ಈ ಕೀಟವನ್ನು ಹತ್ತಿರದಿಂದ ಗಮನಿಸಿದರೆ ನೇರಳೆ ನೀಲಿ ಮಿಶ್ರಿತ ಬಣ್ಣದ ಮೈ ಮೇಲೆ ಸಣ್ಣ ಸಣ್ಣ ಗೆರೆಗಳನ್ನು ಪಟ್ಟಿ ಎಳೆದು ಕೊಂಡಂತಿದೆ. ತಲೆಯ ಭಾಗದಲ್ಲಿ ಚೂಪಾದ ಕೊಂಡಿ ಇದೆ. ಬೆಂಗಳೂರಿನಲ್ಲಿ ಇಂತಹ ಕೀಟಗಳು ಕಾಣಸಿಗುವುದು ಅಪರೂಪ. ಈ ಕೀಟ ಗಿಡ ಮರಗಳ ಪೊದೆಗಳಲ್ಲಿ ಇರುತ್ತದೆ. ಅದು ಹೇಗೋ ಮನೆಯ ಮೆಟ್ಟಿಲು ಮೇಲೆ ಬಿದ್ದಿದ್ದು, ಕಡ್ಡಿಯಿಂದ ಅದನ್ನು ಎತ್ತಿ ಹೊರಗೆ ಹಾಕಲು ಹೋದೆ. ಅರ್ಧ ಇಂಚು ಮೇಲೆ ಹಾರಿ ತನ್ನ ಕೊಂಡಿಯಿಂದ ಚುಚ್ಚಲು ಯತ್ನಿಸಿ ಭಯ ಹುಟ್ಟಿಸಿತು. ಕಡೆಗೆ ಪೊರಕೆಯಿಂದ ಹೊರದೂಡಿದೆ. ಆ ರೀತಿಯ ಕ್ಯಾಟರ್ಪಿಲ್ಲರ್ ಹಾರಿ ಬಂದದ್ದನ್ನು ನಾನು ಕಂಡಿದ್ದು ಇದೇ ಮೊದಲು.

–ತನುಜಾ ಡಿ. ಸೋಮಯಾಜಿ, ಬೆಂಗಳೂರು

